## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 280 |
| ಸದಸ್ಯರ ಹೆಸರು | ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 11-12-20204 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಖಾಸಗಿ ಜಮೀನು / ಸರ್ವೆ ನಂಬರ್ ನಲ್ಲಿರುವ ಮತ್ತು ಜಮೀನು ಸರ್ವೆ ನಂಬರ್ ಗಳಿಗೆ ಲಗತ್ತಾಗಿರುವ ವಿವಿಧ ಬಗೆಯ ನೈಸರ್ಗಿಕ ನೀರಿನ ಮೂಲಗಳ / ಆಕರಗಳ ನೈಸರ್ಗಿಕ ಮೂಲ ಸಂರಚನೆಯನ್ನು ಯಾವ ರೀತಿ ಗುರುತಿಸಲಾಗುತ್ತಿದೆ; ಈ ರೀತಿ ಗುರುತಿಸಲ್ಪಟ್ಟ ಮಾಹಿತಿಯನ್ನು ಯಾವ ಯಾವ ದಾಖಲಾತಿಗಳಲ್ಲಿ ನಮೂದು ಮಾಡಲಾಗುತ್ತಿದೆ; ಈ ರೀತಿ ನಮೂದು ಮಾಡಿದ ದಾಖಲೆಗಳನ್ನು ಯಾವ ರೂಪ ದಲ್ಲಿ ಸಾರ್ವಜನಿಕರಿಗೆ ಮುಕ್ತವಾಗಿರಿ ಸಲಾಗಿದೆ; | ರಾಜ್ಯದಲ್ಲಿ ಮೂಲ ಸರ್ವೆ, ರೀಸರ್ವೆ ಮತ್ತು ರೀ-ಕ್ಲಾಸಿಪಿಕೇಷನ್ ಕಾಲದಲ್ಲಿ ಕೃಷಿ ಜಮೀನುಗಳನ್ನು ಅಳತೆ ಮಾಡುವಾಗ ಸರ್ವೆ ನಂಬರಿನಲ್ಲಿರುವ ಹಾಗೂ ಅದಕ್ಕೆ ಲಗತ್ತಾಗಿರುವ ವಿವಿಧ ಬಗೆಯ ನೈಸರ್ಗಿಕ ನೀರಿನ ಮೂಲಗಳಾದ ನದಿ, ಹಳ್ಳ, ಕಾಲುವೆ, ಪಿಳ್ಳಗಾಲುವೆ, ಕುಂಟೆ ಇತ್ಯಾದಿಗಳನ್ನು ಸಹಾ ಅಳತೆ ಮಾಡಿ ಅವುಗಳು ಸ್ಥಳದಲ್ಲಿ ಇರುವಂತೆಯೇ ಗುರ್ತಿಸಿ ಮಾಹಿತಿಯನ್ನು ಸರ್ವೆ ದಾಖಲೆಯಾದ ಪ್ರತಿ ಪುಸ್ತಕದಲ್ಲಿ ಸ್ಪಷ್ಟವಾಗಿ ದಾಖಲಿಸ ಲಾಗಿರುತ್ತದೆ ಮತ್ತು ಗ್ರಾಮ ನಕಾಶೆಯಲ್ಲಿಯೂ ಸಹಾ ದಾಖಲು ಮಾಡಲಾಗಿರುತ್ತದೆ.<br>ತರಿ ಮತ್ತು ಭಾಗಾಯ್ತು ಜಮೀನುಗಳ ನೀರಿನ ಆಶ್ರಯದ ಬಗ್ಗೆ ಆಕಾರಬಂದಿನಲ್ಲಿ ದಾಖಲಿಸಲಾಗಿರುತ್ತದೆ. ಹಳ್ಳ, ಕಾಲುವೆ ಇತ್ಯಾದಿಗಳ ಉದ್ದ ಮತ್ತು ಅಗಲಗಳನ್ನು ಸಹ ಪ್ರತಿ ಪುಸ್ತಕದಲ್ಲಿ ನಮೂದಿಸಲಾಗಿರುತ್ತದೆ ಮತ್ತು ಟಿಪ್ಪಣಿ & ಪಕ್ಕಾ ಪುಸ್ತಕದಲ್ಲಿ ಚಿಹ್ನೆಯಿಂದ ಗುರ್ತಿಸಲಾಗಿರುತ್ತದೆ. ಈ ಎಲ್ಲಾ ದಾಖಲೆಗಳನ್ನು ಸಾರ್ವಜನಿಕರು ಆನ್.ಲೈನ್.ನಲ್ಲಿ ವೀಕ್ಷಿಸಲು/ಅರ್ಜಿ ಸಲ್ಲಿಸಿ, ನಿಗಧಿತ ಶುಲ್ಕ ಪಾವತಿಸಿ ನಕಲುಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. |
| (ಆ) | ಖಾಸಗಿ ಜಮೀನು / ಸರ್ವೆ ನಂಬರ್ ನಲ್ಲಿರುವ ಮತ್ತು ಜಮೀನು ಸರ್ವೆ ನಂಬರ್ ಗಳಿಗೆ ಲಗತ್ತಾಗಿರುವ ವಿವಿಧ ಬಗೆಯ ನೈಸರ್ಗಿಕ ನೀರಿನ ಮೂಲಗಳ / ಆಕರಗಳ ನೈಸರ್ಗಿಕ ಮೂಲ ಸಂರಚನೆಯನ್ನು ಜಮೀನಿನ ಮಾಲೀಕರ / ಅನುಭವದಾರರ ವೈಯಕ್ತಿಕ ಅಗತ್ಯತೆ ಗಳಿಗನುಗುಣವಾಗಿ ಮಾರ್ಪಾಡು ಮಾಡಲು ಇರುವ | ನೈಸರ್ಗಿಕ ನೀರಿನ ಮೂಲಗಳ/ ಆಕರಗಳ ನೈಸರ್ಗಿಕ ಮೂಲ ಸಂರಚನೆಯನ್ನು ಜಮೀನಿನ ಮಾಲೀಕರ/ ಅನುಭವದಾರರ ವೈಯಕ್ತಿಕ ಅಗತ್ಯತೆಗಳಿಗನುಗುಣವಾಗಿ ಮಾರ್ಪಾಡು ಮಾಡಲು ಅವಕಾಶ ಇರುವುದಿಲ್ಲ.<br><br>ಆದರೆ ನಾಲೆಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 28-ಎ. ಬಿಟ್ಟುಕೊಟ್ಟ ಭೂಮಿಗೆ ಬದಲಾಗಿ ಮಂಜೂರಾತಿ (೧) ಈ ನಿಯಮಗಳಲ್ಲಿ ಏನೇ ಇದ್ದರೂ, ಯಾವನೇ ವ್ಯಕ್ತಿಯು ರಾಜ್ಯ ಸರ್ಕಾರಕ್ಕೆ ಭೂಮಿಯನ್ನು ಬಿಟ್ಟುಕೊಟ್ಟಿದ್ದರೆ, ಈ |

| | | |
|---|---|---|
| | ಅವಕಾಶಗಳು ಯಾವುವು; (ದಾಖಲೆ ಸಹಿತ ವಿವರ ನೀಡುವುದು) | ಕೆಳಗಿನ ಸಂದರ್ಭಗಳಲ್ಲಿ ಅಂಥ ವ್ಯಕ್ತಿಗೆ ಭೂಮಿಯನ್ನು ಮಂಜೂರು ಮಾಡಬಹುದು, ಅಂದರೆ, -<br><br>(i) ಮಾರ್ಗ ಬದಲಾವಣೆಯಿಂದಾಗಿ, ಒಂದು ಖಾಸಗಿ ಭೂಮಿಯ ಮೂಲಕ ನದಿ, ಜಲಮಾರ್ಗ ಅಥವಾ ಗಾಡಿ ದಾರಿಯು ಹಾದುಹೋದರೆ,<br>ಪರಂತು, ಪ್ರತಿಯಾಗಿ ಮಂಜೂರು ಮಾಡಬೇಕಾದ ಭೂಮಿಯು ರೆವೆನ್ಯೂ ದಾಖಲೆಗಳಲ್ಲಿ ನದಿ, ಜಲಮಾರ್ಗ ಅಥವಾ ಗಾಡಿ ದಾರಿಯೆಂದು ನೋಂದಾಯಿತವಾದ ಭೂಮಿಯಾಗಿರತಕ್ಕದ್ದು.<br><br>(ii) ರಲ್ಲಿ ನಾಲೆ ಅಥವಾ ಕಾಲುದಾರಿಯು ಒಬ್ಬ ವ್ಯಕ್ತಿಯ ಖಾಸಗಿ ಭೂಮಿಯನ್ನು ಎರಡಾಗಿ ವಿಭಜಿಸಿದರೆ ಮತ್ತು ಅದನ್ನು ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಅಂಥ ಭೂಮಿಯ ಮೇರೆಯ ಉದ್ದಕ್ಕೂ ತಿರುಗಿಸಬಹುದಾದರೆ, ಎಂದು ಇರುತ್ತದೆ.<br><br>ಮುಂದುವರೆದು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ಹಾಗೂ ತದನಂತರದ ತಿದ್ದುಪಡಿಗಳ ಪ್ರಕರಣ (12)ರನ್ವಯ ಸರ್ಕಾರಿ ಕೆರೆಗಳಿಗೆ ಸಂಬಂಧಿಸಿದಂತೆ , ನೈಸರ್ಗಿಕ ಮೂಲ ಸಂರಚನೆಯನ್ನು ವೈಯಕ್ತಿಕ ಅಗತ್ಯತೆಗಳಿಗನುಗುಣವಾಗಿ ಮಾರ್ಪಾಡು ಮಾಡಲು ಯಾವುದೇ ಅವಕಾಶವಿರುವುದಿಲ್ಲ.<br>ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| (ಇ) | ಗ್ರಾಮ ನಕ್ಷೆಗಳ ಪ್ರಕಾರ ಯಾವುದೇ ಖಾಸಗಿ ಜಮೀನು / ಸರ್ವೆ ನಂಬರ್ ಗಳಲ್ಲಿರುವ ವಿವಿಧ ಬಗೆಯ ನೈಸರ್ಗಿಕ ನೀರಿನ ಮೂಲಗಳು (ನದಿ, ತೊರೆ, ರಾಜಕಾಲುವೆ, ನಾಲೆ, ಹಳ್ಳ, ಕೊರಕಲು ಇತ್ಯಾದಿಗಳನ್ನು) ಅಧಿಕೃತವಾಗಿ ಸರ್ಕಾರದ ಯಾವ ಇಲಾಖೆಗೆ ಸೇರಿರುತ್ತವೆ? (ದಾಖಲೆ ಸಹಿತ ವಿವರ ನೀಡುವುದು) | ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಜಲಸಂಪನ್ಮೂಲ ಇಲಾಖೆ, ನಗರಾಭಿವೃದ್ಧಿ ಇಲಾಖೆ, ನಗರ ಸ್ಥಳೀಯ ಸಂಸ್ಥೆಗಳು, ಸಣ್ಣ ನೀರಾವರಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ . ಕಂದಾಯ ಇಲಾಖೆಗಳ ವ್ಯಾಪ್ತಿಗೆ ಒಳಪಡುತ್ತದೆ. |

ಸಂಖ್ಯೆ: ಕಂಇ 371 ಎಲ್ಆರ್ಆರ್ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 280 ಕ್ಕೆ ಸಂಬಂಧಿಸಿದ ಅನುಬಂಧ – 1

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ಹಾಗೂ ತದನಂತರದ ತಿದ್ದುಪಡಿಗಳ ಪ್ರಕರಣ (12) ರನ್ವಯ

**ಕೆರೆಗಳಲ್ಲಿ ನಿಷೇಧಿಸಲಾದ ಚಟುವಟಿಕೆಗಳು**.- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾದುದು ಏನೇ ಇದ್ದರೂ, ಯಾವೊಬ್ಬ ವ್ಯಕ್ತಿಯು ಅಥವಾ ಸಂಸ್ಥೆಯು ಅಥವಾ ಸಂಘಟನೆಯು (ನೋಂದಾಯಿತವಾದ ಅಥವಾ ನೋಂದಾಯಿತವಾಗಿಲ್ಲದ) ಅಥವಾ ಕಂಪನಿಯು ಅಥವಾ ಫರ್ಮು ಅಥವಾ ಸಂಘವು, ಸರ್ಕಾರಿ ಇಲಾಖೆಗಳು, ನಿಗಮ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಮತ್ತು ಅವುಗಳ ಏಜೆಂಟರು ಅಥವಾ ನೌಕರರು ಅಥವಾ ಅವುಗಳ ಪರವಾಗಿ ಯಾವುದೇ ಸಂಸ್ಥೆಯು,-

1. ನೀರನ್ನು ಸಂಗ್ರಹಿಸುವುದಕ್ಕಾಗಿ ಅಥವಾ ಹಿಡಿದಿಟ್ಟುಕೊಳ್ಳುವುದಕ್ಕಾಗಿ ಅಥವಾ 5ನೇ ಪ್ರಕರಣದ (9)ನೇ ಖಂಡದಲ್ಲಿ ಹೇಳಿದ ಉದ್ದೇಶದ ಹೊರತಾಗಿ ಇತರ ಯಾವುದೇ ಉದ್ದೇಶಕ್ಕಾಗಿ ಕೆರೆಯನ್ನು ಬಳಸತಕ್ಕದ್ದಲ್ಲ;

   *5ನೇ ಪ್ರಕರಣದ (9)ನೇ ಖಂಡ : " ಚರಂಡಿಯ ಕಶ್ಮಲಗಳನ್ನು ಕಡಿಮೆ ಮಾಡುವ ಮತ್ತು ಚರಂಡಿಯ ರೊಚ್ಚನ್ನು ಕೆರೆಗಳಿಗೆ ಹರಿಯಬಿಡದಿರುವುದರ ಮೂಲಕ ಜಲ ಜೀವವೈವಿಧ್ಯ, ಜಲಪಕ್ಷಿಗಳು ಮತ್ತು ಜಲೀಯ ಸಸ್ಯಗಳನ್ನು ಸುಧಾರಿಸುವುದು ಮತ್ತು ಅವುಗಳಿಗೆ ಬೇಕಾದ ಪರಿಸರವನ್ನು (ಜೌಗು ಭೂಮಿ) ಸೃಜಿಸುವುದು;"*

2. ಸರ್ಕಾರದ ಅನುಮತಿ ಇಲ್ಲದೆ ಕೆರೆ ಭೂಮಿಯ ಮೇಲೆ ಯಾವುದೇ ರಚನೆಯನ್ನು ನಿರ್ಮಿಸತಕ್ಕದ್ದಲ್ಲ, ಯಾವುದೇ ಕೆರೆ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಅಧಿಭೋಗಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಪ್ರವಾಹದ ವಿರುದ್ಧವಾಗಿ ಮತ್ತು ಪ್ರವಾಹದ ಹರಿವಿನಲ್ಲಿರುವ ಕೆರೆಯಲ್ಲಿ ಅಥವಾ ಕೆರೆಯಿಂದ ನೀರು ಹರಿದು ಬರುತ್ತಿರುವ ಅಥವಾ ನೀರು ಹರಿದು ಹೋಗುತ್ತಿರುವ ಸ್ವಾಭಾವಿಕ ಅಥವಾ ಸಾಮಾನ್ಯವಾಗಿ ನೀರು ಹರಿಯುತ್ತಿರುವುದಕ್ಕೆ ಯಾವುದೇ ಅಡ್ಡಿಯನ್ನು ಉಂಟು ಮಾಡತಕ್ಕದ್ದಲ್ಲ;

3. ಕೆರೆಯ ಹೊರಗಿನ ಸರಹದ್ದಿನಿಂದ ಮೂವತ್ತು ಮೀಟರುಗಳಳೊಗೆ ಯಾವುದೇ ವಾಣಿಜ್ಯ ಅಥವಾ ಮನರಂಜನೆ ಅಥವಾ ಕೈಗಾರಿಕಾ ಸಂಕೀರ್ಣಗಳನ್ನು ಕಟ್ಟತಕ್ಕದ್ದಲ್ಲ ಅಥವಾ ಯಾವುದೇ ಕೈಗಾರಿಕಾ ಚಟುವಟಿಕೆಗಳನ್ನು ನಡೆಸತಕ್ಕದ್ದಲ್ಲ; ಮತ್ತು

4. ವಾಹನವನ್ನು ಬಳಸಿ ಅಥವಾ ಇತರ ರೀತಿಯಲ್ಲಿ ಕೆರೆಯಲ್ಲಿ ಭಗ್ನಾವಶೇಷಗಳನ್ನು, ಪೌರ ಘನತ್ಯಾಜ್ಯಗಳನ್ನು, ಕೆಸರನ್ನು ಅಥವಾ ಮಣ್ಣನ್ನು ಅಥವಾ ದ್ರವ ತ್ಯಾಜ್ಯಗಳನ್ನು ಅಥವಾ ಯಾವುವೇ ಮಾಲಿನ್ಯಕಾರಕಗಳನ್ನು ರಾಶಿ ಹಾಕತಕ್ಕದ್ದಲ್ಲ;

5. ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಕೆರೆಯಲ್ಲಿ ಸಂಸ್ಕರಿಸದಿರುವ ಚರಂಡಿ ನೀರನ್ನು ಹರಿಬಿಡತಕ್ಕದ್ದಲ್ಲ;

6. ಕೆರೆಯ ಒಡ್ಡು ಸೇರಿದಂತೆ ಕೆರೆ ಪ್ರದೇಶದೊಳಗೆ ರಸ್ತೆಗಳನ್ನು, ಸೇತುವೆಗಳನ್ನು ಮತ್ತು ಅದೇ ರೀತಿಯ ಇತರ ರಚನೆಗಳನ್ನು ನಿರ್ಮಿಸತಕ್ಕದ್ದಲ್ಲ. ಪ್ರಾಧಿಕಾರವು, ಅಂಥ ಕಾಮಗಾರಿಯ ತರುವಾಯವೂ ಕೆರೆಗಳ ಮೂಲ ಸಾಮರ್ಥ್ಯ ಕಡಿಮೆಯಾಗುವುದಿಲ್ಲ

ಎಂಬುದನ್ನು ಖಚಿತಪಡಿಸಿಕೊಂಡ ತರುವಾಯ ಮಾತ್ರವೇ ಅಂಥ ಕಾಮಗಾರಿಗಳಿಗೆ ಅನುಮತಿಯನ್ನು ನೀಡಬಹುದು;

7. ಒಡ್ಡನ್ನು, ನಿರುಪಯುಕ್ತ ತೂಬಿನ ಮೂಲ ಎತ್ತರವನ್ನು ಕಡಿಮೆ ಮಾಡುವುದ ಒಳಗೊಂಡಂತೆ ನಿರುಪಯುಕ್ತ ತೂಬನ್ನು ಒಡೆದುಹಾಕತಕ್ಕದ್ದಲ್ಲ ಅಥವಾ ಬೇಲಿಯನ್ನು, ಗಡಿಗುರುತು ಕಲ್ಲುಗಳನ್ನು ತೆಗೆದುಹಾಕತಕ್ಕದ್ದಲ್ಲ ಅಥವಾ ಪ್ರಾಧಿಕಾರವು ನಿರ್ಮಿಸಿದ ಭಿತ್ತಿಪತ್ರಗಳನ್ನು ಅಥವಾ ಯಾವುದೇ ಸೂಚನಾ ಫಲಕಗಳನ್ನು ತೆಗೆದು ಹಾಕತಕ್ಕದ್ದಲ್ಲ; ಮತ್ತು

8. ಕೆರೆಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಬಾಧಕವಾದ ಯಾವುದೇ ಕೃತ್ಯವನ್ನು ಮಾಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮದಲ್ಲಿರುವುದು ಯಾವುದು, ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಯಾವುದೇ ಕೆರೆಯಿಂದ ಕುಡಿಯುವುದಕ್ಕಾಗಿ ಅಥವಾ ನೀರಾವರಿಗಾಗಿ ಅಥವಾ ಮಾನವ ಬಳಕೆಗಾಗಿನ ಯಾವುದೇ ಉದ್ದೇಶಕ್ಕಾಗಿ ನೀರನ್ನು ತೆಗೆದುಕೊಳ್ಳುವುದನ್ನು ಪ್ರತಿಬಂಧಿಸತಕ್ಕದ್ದಲ್ಲ:

ಮತ್ತು ಪರಂತು, ಈ ಅಧಿನಿಯಮದಲ್ಲಿರುವುದಾವುದೂ, ಸರ್ಕಾರವು ಮತ್ತು ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಯಾವುದೇ ಕೆರೆಯಲ್ಲಿ ಅದರ ಲೈಸನ್ಸ್ದಾರನು, ಗೇಣಿದಾರನು ಅಥವಾ ಗುತ್ತಿಗೆದಾರನು (ಕೆರೆಯ ಜಲ ಜೀವ ಪರಿಸರ ವ್ಯವಸ್ಥೆಗೆ ಅಪಾಯಕಾರಿಯಾದ ಅಥವಾ ಉಪದ್ರವಕಾರಿಯಾದ ಮೀನಿನ ಹೊರತಾಗಿ) ಮೀನು ಮರಿಗಳ ಸಂಗ್ರಹಣೆಯನ್ನು ಮತ್ತು ಮಿನುಗಾರಿಕೆ ಅಭಿವೃದ್ಧಿಯನ್ನು ಪ್ರತಿಬಂಧಿಸತಕ್ಕದ್ದಲ್ಲ.